

## ಕಂಬದ ಮೇಲೆ ಭರತ, ಬಾಹುಬಲಿ

ವಿಜಯನಗರದ ವಾಸ್ತುಶಿಲ್ಪ ವಿಶೇಷವಾಗಿದ್ದು, ಅನಾದಿ ಕಾಲದಲ್ಲಿ ನಿರ್ಮಿಸಲಾದ ಮೂಡಬಿದರಿಯ ಸಾವಿರ ಕಂಬದ ಬಸದಿಯು ಅದಕ್ಕೆ ಹಿಡಿದ ಕನ್ನಡಿ. ಇಲ್ಲಿನ ಭವ್ಯವಾದ ತೆರೆದ ಕಂಬದ ಸಭಾಂಗಣ ನೋಡುಗರ ಕಣ್ಮನ ಸೆಳೆಯುತ್ತದೆ. ಗರ್ಭಗುಡಿಯಲ್ಲಿ 2.5 ಮೀಟರ್ ಎತ್ತರದ ತೀರ್ಥಂಕರ ಚಂದ್ರನಾಥ ವಿಗ್ರಹವಿದ್ದು, ಕಂಬ ಕಂಬಗಳೂ ಸುಂದರವಾದ ವಿಭಿನ್ನ ಕೆತ್ತನೆಗಳ ಕಲಾಭಂಡಾರವೇ ಕಣ್ತುಂಬುತ್ತದೆ. ಅಲ್ಲಿನ ಕಂಬವೊಂದರ ಮೇಲೆ ಮೊದಲನೆಯ ತೀರ್ಥಂಕರ ವೃಷಭನಾಥನ ಮಕ್ಕಳಾದ ಭರತ ಹಾಗೂ ಬಾಹುಬಲಿಯ ನಡುವಿನ ದೃಷ್ಟಿಯುದ್ಧ, ಮಲ್ಲಯುದ್ಧದ ಸುಂದರ ಕೆತ್ತನೆಗಳಿವೆ. ವಜ್ರದೇಹಿಗಳಾಗಿದ್ದ ಭರತ ಮತ್ತು ಬಾಹುಬಲಿಯ ನಡುವಿನ ಸ್ವಾಭಿಮಾನದ ದೃಷ್ಟಿಯುದ್ಧ, ಮಲ್ಲಯುದ್ಧ ಮತ್ತು ಜಲಯುದ್ಧ ಜಗತ್ಪ್ರಸಿದ್ಧವಾದುದು. ಈ ಯುದ್ಧಗಳಲ್ಲಿ ಬಾಹುಬಲಿಯೇ ಗೆದ್ದು ಗೊಮ್ಮಟನಾಗಿ ಅಜರಾಮರನಾಗಿದ್ದಾನೆ ಎಂಬುದು ಐತಿಹ್ಯ.

—ಎಸ್. ಪ್ರಭಾವತಿ, ಬೆಂಗಳೂರು



## ಸಿದ್ದಪ್ಪಜ್ಜನ ಪ್ರತೀಕದ ಹುತ್ತ

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಸುಕ್ಷೇತ್ರ ಸಿದ್ದನಕೊಳ್ಳದಲ್ಲಿ ಸಿದ್ದಪ್ಪಜ್ಜನ ಗದ್ದುಗೆ ಇದೆ. ಅಲ್ಲಿಯೇ ಒಂದು ಮೂಲೆಯಲ್ಲಿ ಹನ್ನೊಂದು ಅಡಿಯ ಹುತ್ತವಿದೆ. ಈ ಹುತ್ತದಲ್ಲಿ ನಾಗರಹಾವು ವಾಸವಿದ್ದು, ಅದು ಸಿದ್ದಪ್ಪಜ್ಜನ ಪ್ರತಿರೂಪವೆಂದೇ ಇಲ್ಲಿನ ಭಕ್ತರು ನಂಬಿದ್ದಾರೆ. ಅದು ಯಾರಿಗೂ ತೊಂದರೆ ಕೊಟ್ಟಿಲ್ಲ. ಈ ಹುತ್ತವನ್ನು ನಾಶಪಡಿಸಲು ಎರಡು ಮೂರು ಸಾರಿ ಕಿಡಿಗೇಡಿಗಳು ಪ್ರಯತ್ನಿಸಿದ್ದರೂ ಅದು ಫಲಕಾರಿಯಾಗಲಿಲ್ಲ. ಹುತ್ತದ ಮುಂದೆ ತ್ರಿಶೂಲ ಇಟ್ಟು, ನಿತ್ಯ ಪೂಜೆ ಸಲ್ಲಿಸಲಾಗುತ್ತಿದೆ. ನಾಗರಪಂಚಮಿಯಂದು ಇಲ್ಲಿಗೆ ಭಕ್ತರ ದಂಡೇ ಹರಿದು ಬರುತ್ತದೆ.

—ಡಾ. ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ

## ಚುಕ್ಕೆ ಗೂಬೆ



ಈ ಚಿತ್ರದಲ್ಲಿ ಕಾಣುತ್ತಿರುವ ಪುಟ್ಟ ಗೂಬೆಯನ್ನು 'ಸ್ಪಾಟೆಡ್ ಅವ್ಲೆಟ್' ಎಂದು ಕರೆಯಲಾಗುತ್ತದೆ. ಮೈಮೇಲೆ ಬಿಳಿಯ ಚುಕ್ಕೆಗಳಿರುವುದರಿಂದ ಹಾಗೂ ನೋಡಲು ಇದೊಂದು ಮರಿಯಂತೆ ಕಾಣುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ನೋಡಲು ಮರಿಯಂತಿದ್ದರೂ ಇದು ಚಿಕ್ಕ ಗೂಬೆಯೇ ಸರಿ. ಏಷ್ಯಾದ್ಯಂತ ಕಂಡುಬರುವ ಈ ಗೂಬೆಯು ಮಿಕ್ಕ ಗೂಬೆ ಪ್ರಭೇದದ ಹಕ್ಕಿಗಳಿಗಿಂತಲೂ ವಿಭಿನ್ನವಾದದ್ದು. ಗಾತ್ರದ ಕಾರಣಕ್ಕೆ ಬಯಲು ಪ್ರದೇಶದಲ್ಲಿ ಇದಿದ್ದರೂ ಗುರುತಿಸುವುದೇ ಕಷ್ಟ. ಪುಟ್ಟ ಗುಂಪುಗಳಲ್ಲಿ ವಾಸಿಸುವ ಇದು, ಮರಗಳ ಪೊಟರೆಗಳಲ್ಲಿ ಅಥವಾ ಬಂಡೆಗಳ, ಹಳೆಯ ಕಟ್ಟಡಗಳ ತೂತುಗಳಲ್ಲಿ ನೆಲೆಸುತ್ತದೆ. ಇದು ಮೂರರಿಂದ ಐದು ಮೊಟ್ಟೆಗಳನ್ನಿಡುತ್ತದೆ.

ಕೇವಲ 21 ಸೆಂ.ಮೀ. ಗಾತ್ರವಿರುವ ಈ ಗೂಬೆಯ ಮೇಲ್ಭಾಗ ಬೂದು, ಕಂದು ಬಣ್ಣಗಳಿಂದ ಕೂಡಿದ್ದು, ಬಿಳಿಯ ಚುಕ್ಕಿಗಳನ್ನು ಹೊಂದಿರುತ್ತದೆ. ಕೆಳಭಾಗ ಬಿಳಿಯಾಗಿದ್ದು, ಕಂದು ಗೆರೆಗಳನ್ನು ಹೊಂದಿರುತ್ತದೆ. ಕಣ್ಣು ಹಳದಿ ಬಣ್ಣದಲ್ಲಿರುತ್ತದೆ. ಗಂಡು–ಹೆಣ್ಣು ಎರಡೂ ಹಕ್ಕಿಗಳು ಒಂದೇ ರೀತಿಯಿರುತ್ತವೆ. ಇದರ ಕೂಗು ಒರಟಾಗಿ ಹಾಗೂ ಜೋರಾಗಿದ್ದು, ಬೆಳಗಿನ ಜಾವ ಅಥವಾ ಸೂರ್ಯಾಸ್ತದ ಸಮಯದಲ್ಲಿ ಕೂಗುತ್ತದೆ. ಸಾಮಾನ್ಯವಾಗಿ ನಿಶಾಚರಿಯಾಗಿರುವ ಇದು, ಬೆಳಗಿನ ಹೊತ್ತು ವಿಶ್ರಮಿಸುತ್ತಿರುವುದನ್ನು ಕಾಣಬಹುದು. ಕಾವೇರಿ ವನ್ಯಜೀವಿಧಾಮದಲ್ಲಿರುವ ಗೋಪಿನಾಥಂ ಹಳ್ಳಿಯ ಗೋಪಿನಾಥಂ ಮಿಸ್ಟ್ರಿ ಟ್ರೇಲ್ಸ್ ಶಿಬಿರದಲ್ಲಿ ಈ ಗೂಬೆ ನೋಡಲು ಸಿಕ್ಕಿತು.

—ಬಿ.ಆರ್. ಸುಹಾಸ್, ಬೆಂಗಳೂರು

## 29 ವರ್ಷದ ಬಲ್ಬ್



ವಿದ್ಯುತ್ ಬಲ್ಬ್‌ಗಳ ಬಾಳಿಕೆ ಒಂದೆರಡು ವರ್ಷ. ಕೆಲವಂತೂ ಅಂಗಡಿಯಿಂದ ಮನೆಗೆ ತಂದ ಎರಡೇ ದಿನಕ್ಕೆ ಡಮ್ ಅನ್ನುವುದೂ ಉಂಟು. ಹೀಗಿರುವಾಗ ಇಲ್ಲೊಂದು ಬಲ್ಬ್ ಸುಮಾರು 29 ವರ್ಷಗಳಿಂದ ನಿರಂತರವಾಗಿ ಬೆಳಗುತ್ತಿದೆ. 30ನೇ ವರ್ಷದ ಸಂಭ್ರಮಕ್ಕೆ ಸಜ್ಜಾಗುತ್ತಿದೆ. ಮೈಸೂರಿನ ಸಾಗರಿಕಾ ಹೆಸರಿನ ಮನೆಯೊಂದರಲ್ಲಿ ಈ ಬಲ್ಬ್ ಇದ್ದು, ಈ ಮನೆಯ ಗೃಹಪ್ರವೇಶ ಸಂದರ್ಭದಲ್ಲಿ (2–2–1995) ಬಲ್ಬ್ ಅಳವಡಿಸಲಾಯಿತು.

ಅಂದು ಅಳವಡಿಸಿದ 25 ವ್ಯಾಟ್ ಫಿಲಮೆಂಟ್ ಬಲ್ಬ್ (CMZ 1855, 25 ವ್ಯಾಟ್ಸ್) ಇಂದಿಗೂ ಬೆಳಕು ನೀಡಿ ಮನೆಯವರ ಮನದಲ್ಲಿ ಭಾವನಾತ್ಮಕ ಸಂಬಂಧ ಬೆಸೆದುಕೊಂಡಿದೆ. ಅಂದಿಗೂ ಇಂದಿಗೂ ಒಂದೇ ಸಮನಾಗಿ ಬೆಳಕು ನೀಡುತ್ತಿರುವ ಈ ಪುಟ್ಟ ಬಲ್ಬ್‌ಗೆ ಮನೆಯಿಂದ ಹೊರಡುವಾಗಲೂ, ಮತ್ತೆ ಒಳಬರುವಾಗಲೂ ಕೈ ಜೋಡಿಸಿ ನಮಸ್ಕರಿಸುವುದು ಮನೆಯವರ ಭಕ್ತಿಪೂರ್ವಕ ವಾಡಿಕೆಯಾಗಿದೆ.

—ಸುಮನಾ, ಬೆಂಗಳೂರು